ನೀಡಿರುತ್ತದೆ. ಇದಕ್ಕಾಗಿ ಪ್ರವಾಸೋದ್ಯಮ ಇಲಾಖೆಯು ಮೆ: ಮೈಸೂರು ಲ್ಯಾಂಪ್ಸ್ ಲಿ.. ರವರು ರೂ. 5.45 ಲಕ್ಷಕ್ಕೆ ಸಲ್ಲಿಸಿದ ನಕ್ಷೆ ಹಾಗೂ ಅಂದಾಜನ್ನು ಕೇಂದ್ರ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಿದೆ.

ಸೂಳೆಕೋಟೆ ಸೇತುವೆ ನಿರ್ಮಾಣ

293(1664) ಶ್ರೀ ಕೆ.ಎನ್. ಕಾಳಮರಿಗೌಡ (ಪಿರಿಯಾಪಟ್ಟಣ) : ಮಾನ್ಯ ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಿರಿಯಾಪಟ್ಟಣ ತಾಲ್ಲೂಕಿನ ಸೂಳೆಕೋಟೆ ಸೇತುವೆ ನಿರ್ಮಾಣಕ್ಕೆ ಅಂದಾಜು ಮಾಡಿರುವ ಹಣ ಎಷ್ಟು ಹಾಗೂ ಈವರೆವಿಗೂ ಎಷ್ಟು ಹಣ ಖರ್ಚಾಗಿರುತ್ತದೆ;

ಆ) ಇದನ್ನು ಪೂರ್ಣಗೊಳಿಸಲು ಇನ್ನು ಎಷ್ಟು ಹಣ ಬೇಕಾಗುತ್ತದೆ;

ಇ) ಈ ಸೇತುವೆ ಕೆಲಸವನ್ನು ಎಷ್ಟು ಸಮಯದಲ್ಲಿ ಪೂರ್ಣಗೊಳಿಸಲಾಗುವುದು?

ಶ್ರೀ ಜಿ.ಹೆಚ್.ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು) :

ಅ) ಈ ಕಾಮಗಾರಿ ಅಂದಾಜು ಮೆಚ್ಚ 42.00 ಲಕ್ಷ ರೂ.ಗಳಾಗಿರುತ್ತದೆ. ಇದುವರೆವಿಗೂ 20.57 ಲಕ್ಷ ರೂ.ಗಳು ಖರ್ಚಾಗಿರುತ್ತದೆ.

ಆ) 31.00 ಲಕ್ಷರೂ.ಗಳು ಬೇಕಾಗುತ್ತದೆ.

ಇ) ಅನುದಾನದ ಲಭ್ಯತೆಯ ಮೇಲೆ ಸುಮಾರು 2 ವರ್ಷಗಳಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು.

ಕಡಲು ಕೊರೆತಕ್ಕೆ ಮಾಸ್ಟರ್ ಪ್ಲಾನ್

294 (1615) ಶ್ರೀ ಎ.ರುಕ್ಮಯ ಪೂಜಾರಿ (ವಿಟ್ಲ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಡಲು ಕೊರೆತಕ್ಕೆ ಸಂಬಂಧಿಸಿದಂತೆ ರಾಜ್ಯದ 320ಕಿ.ಮೀ. ಕರಾವಳಿಯ ಉದ್ದಕ್ಕೆ ಏನಾದರೂ ಮಾಸ್ಟರ್ ಪ್ಲಾನು ರಚಿಸಲಾಗಿದೆಯೇ :

ಆ) ರಚಿಸಲಾಗಿದ್ದಲ್ಲಿ ಅದನ್ನು ಕೇಂದ್ರಕ್ಕೆ ಮಂಜೂರಾತಿ ಹಾಗೂ ಅನುದಾನಕ್ಕಾಗಿ ಯಾವಾಗ ಕಳುಹಿಸಲಾಗಿದೆ ;

ಇ) ಕೇಂದ್ರದಿಂದ ಈ ಉದ್ದೇಶಕ್ಕೆ ಈವರೆಗೆ ಎಷ್ಟು ಅನುದಾನ ಬಂದಿರುತ್ತದೆ :

ಈ) ಬಂದಿರುವ ಹಣದ ಉಪಯೋಗವಾಗಿದೆಯೇ :

ಉ) ಕೇಂದ್ರದ ಸಹಾಯದ ಹೊರತಾಗಿ ರಾಜ್ಯದೊಡನೆ ಈ ಬಗ್ಗೆ ಏನಾದರೂ ಯೋಜನೆಗಳಿವೆಯೇ?